## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1760/2025

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಸಕೀನಾ ಬಾಯಿ | CW:12 | PW: 8 |
| ಗಂಡನ ಹೆಸರು | : | ಮಹದೇವಪ್ಪ | | |
| ವಯಸ್ಸು | : | 61 | | |
| ವೃತ್ತಿ | : | ಕೂಲಿ | | |
| ವಾಸಸ್ಥಳ | : | ಸುರಹೊನ್ನೆ | | |

ದಿನಾಂಕಃ 17.06.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ - ಮಾನ್ಯ ಸ.ಸ.ಅ.ರವರಿಂದಃ-

ಆರೋಪಿಗಳು ಗೊತ್ತು. ಚಾಸಾ 1 ರಿಂದ 11 ರವರು ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿಗಳು ಚಾಸಾ 2 ರವರಿಗೆ ಹೊಡೆದಿಲ್ಲ, ಹಲ್ಲೆ ಮಾಡಿಲ್ಲ, ನನಗೂ ಹಾಗೂ ಚಾಸಾ 1 ರಿಂದ 11 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಕಬ್ಬಿಣದ ಕೈಕಡಗವನ್ನು ನಾನು ಈ ಹಿಂದೆ ನೋಡಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿಃ 21.05.2025 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಚಾಸಾ 1 ರವರು ಶ್ರೀಮತಿ ಮಂಜಮ್ಮ ಕೋಂ ಭೋಟಿ ರಾಜಪ್ಪ ಇವರ ಮನೆಯ ಮುಂದಿನ ಸಿಸಿ ರಸ್ತೆಯಲ್ಲಿ ಊಟ ಮಾಡಿ

ವಾಕ್ ಮಾಡುತ್ತಿದ್ದಾಗ ಆರೋಪಿಗಳೆಲ್ಲರೂ ಕುಡಿದು ಬಂದು ಅನಾವಶ್ಯಕವಾಗಿ ಚಾಸಾ 1, 3 ರಿಂದ 11 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆರೋಪಿಗಳೆಲ್ಲರೂ ಚಾಸಾ 1 ರವರನ್ನು ಅಡ್ಡಗಟ್ಟಿ ಹಲ್ಲೆ ಮಾಡಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ಆರೋಪಿಗಳೆಲ್ಲರೂ ತಡರಾತ್ರಿಯಲ್ಲಿ ಅವರ ಮನೆಯೊಳಗೆ ಡಕ್ ಸೌಂಡ್ ನ್ನು ಜೋರಾಗಿ ಹಾಕಿಕೊಂಡು ರಸ್ತೆಯಲ್ಲಿ ಕುಣಿದು ಕುಪ್ಪಳಿಸುತ್ತಾ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 7.30 ರ ಸಮಯದಲ್ಲಿ ಚಾಸಾ 2 ರವರು ಸುರಹೊನ್ನೆ ಗ್ರಾಮದ ಶಾಂತಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿದ್ದಾಗ ಆರೋಪಿಗಳೆಲ್ಲರೂ ಚಾಸಾ 2 ರವರ ಮೇಲೆ ಜಗಳ ತೆಗೆದು ತಮ್ಮ ಕೈಗಳಿಂದ ನನ್ನ ಮೇಲೆ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ತನ್ನ ಕಡಗದಿಂದ ಚಾಸಾ 2 ರವರ ಎಡಭುಜಕ್ಕೆ ಗುದ್ದಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಈ ಸಂಬಂಧ ನಾನು ಪೋಲೀಸರಿಗೆ 1 ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 16 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿಗಳ ಪರ ವಕೀಲರಿಂದಃ-

ಆರೋಪಿಗಳ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.